13

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ ದಿನಾಂಕ : DATE: 19/9/2020

**ಕನ್ನಡಪ್ರಭ ಸಂಪಾದಕೀಯ**

# ಮೂರು ಕೃಷಿ ಮಸೂದೆಗಳ ಬಗ್ಗೆ ಇರುವ ಆತಂಕ ನಿವಾರಣೆ ಅವಶ್ಯ

ಕೇಂದ್ರ ಸರ್ಕಾರ ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಮೂರು ಮಹತ್ವದ ಮಸೂದೆಗಳಿಗೆ ಲೋಕಸಭೆಯಲ್ಲಿ ಅಂಗೀಕಾರ ಪಡೆದಿದೆ. ಈ ಮಸೂದೆಗಳು ಸಂಸತ್ತಿನಲ್ಲಿ ಮಂಡನೆಯಾಗುವುದು ನಿಗದಿಯಾಗುತ್ತಿದ್ದಂತೆ ದೇಶದ ಬೇರೆ ಬೇರೆ ಮೂಲೆಗಳಿಂದ ರೈತರು ವಿರೋಧ ವ್ಯಕ್ತಪಡಿಸಲು ಆರಂಭಿಸಿದ್ದರು. ಈಗಲೂ ದೇಶಾದ್ಯಂತ ರೈತರು ಇವುಗಳ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದಾರೆ. ಇನ್ನೊಂದೆಡೆ, ವಿರೋಧ ಪಕ್ಷಗಳಂತೂ ಈ ಮಸೂದೆಗಳು ಕೃಷಿ ಕ್ಷೇತ್ರವನ್ನು ಹಾಳುಮಾಡಲೆಂದೇ ತಂದಿರುವಂಥವು, ಇವುಗಳಿಂದ ದೇಶದ ಕೃಷಿ ಕ್ಷೇತ್ರ ಕಾರ್ಪೊರೇಟ್ ಕುಳಗಳ ಕೈಗೆ ಹೋಗಿ ಸೇರುತ್ತದೆ, ಸದ್ಯ ಅಷ್ಟೋ ಇಷ್ಟೋ ಸಂಪಾದನೆ ಮಾಡಿಕೊಂಡು ಹೇಗೋ ಜೀವನ ನಡೆಸಿಕೊಂಡು ಹೋಗುತ್ತಿರುವ ಬಡ ರೈತರು ಮತ್ತು ಸಣ್ಣ ಹಿಡುವಳಿದಾರರು ಕೃಷಿ ಭೂಮಿ ಕಳೆದುಕೊಂಡು ಬೀದಿಗೆ ಬರುತ್ತಾರೆ, ಕೃಷಿ ಭೂಮಿಗಳೇ ಕ್ರಮೇಣ ಕಣ್ಮರೆಯಾಗಿ ದೇಶದ ಆಹಾರ ಭದ್ರತೆಗೆ ಧಕ್ಕೆ ಬರಲಿದೆ ಎಂದು ತೀವ್ರ ವಿರೋಧ ವ್ಯಕ್ತಪಡಿಸುತ್ತಿವೆ. ಆದರೆ, ಕೇಂದ್ರ ಸರ್ಕಾರ ಈ ಮಸೂದೆಗಳಿಂದ ದೇಶದ ಕೃಷಿ ಕ್ಷೇತ್ರದಲ್ಲಿ ಭಾರಿ ಸುಧಾರಣೆಯಾಗಲಿದೆ ಮತ್ತು ರೈತರ ಜೀವನದಲ್ಲಿ ಹೊಸ ಬೆಳಕು ಮೂಡಲಿದೆ ಎಂದು ಸಮರ್ಥಿಸಿಕೊಳ್ಳುತ್ತಿದೆ. ರೈತರ ಆದಾಯ ದ್ವಿಗುಣಗೊಳಿಸುವ ಭರವಸೆ ಈಡೇರಿಸಲು ಇವುಗಳನ್ನು ಜಾರಿಗೆ ತರಲಾಗಿದೆ ಎಂದೂ ಹೇಳುತ್ತಿದೆ. ರೈತರು ಸರಿಯಾದ ಮಾಹಿತಿಯಿಲ್ಲದೆ ಪ್ರತಿಭಟನೆ ನಡೆಸುತ್ತಿದ್ದಾರೆ ಮತ್ತು ಪ್ರತಿಪಕ್ಷಗಳು ರಾಜಕೀಯ ಕಾರಣಕ್ಕಾಗಿ ವಿರೋಧಿಸುತ್ತಿವೆ ಎಂದೇ ಒಂದು ಕ್ಷಣ ಭಾವಿಸೋಣ. ಆದರೆ, ಈ ಮಸೂದೆಗಳನ್ನು ವಿರೋಧಿಸಿ ಎನ್‌ಡಿಎಯ ಆಪ್ತ ಮಿತ್ರನಾಗಿರುವ ಶಿರೋಮಣಿ ಅಕಾಲಿದಳ ಪಕ್ಷದ ನಾಯಕಿ ಹರಸಿಮ್ರತ್ ಕೌರ್ ಬಾದಲ್ ಕೇಂದ್ರ ಸರ್ಕಾರದಲ್ಲಿ ತಾವು ಹೊಂದಿದ್ದ ಆಹಾರ ಸಂಸ್ಕರಣೆ ಉದ್ದಿಮೆಗಳ ಸಚಿವ ಸ್ಥಾನಕ್ಕೇ ರಾಜೀನಾಮೆ ನೀಡಿದ್ದಾರೆ. ಹೀಗಾಗಿ ಈ ಮೂರು ಮಸೂದೆಗಳ ವಿಚಾರ ದೊಡ್ಡ ವಿವಾದವಾಗಿ ಮಾರ್ಪಾಡಾಗಿರುವುದಂತೂ ಸುಳ್ಳಲ್ಲ.

> **ಪ್ರತಿಪಕ್ಷಗಳ ವಿರೋಧವೇನೋ ಸರಿ, ಆದರೆ ಕೇಂದ್ರ ಸಚಿವರೇ ಒಬ್ಬರು ಇವುಗಳನ್ನು ವಿರೋಧಿಸಿ ರಾಜೀನಾಮೆ ನೀಡಿದ್ದಾರೆ. ರೈತ ಸಂಘಗಳಂತೂ ತೀವ್ರ ವಿರೋಧ ವ್ಯಕ್ತಪಡಿಸುತ್ತಿವೆ.**

ಹಾಗಿದ್ದರೆ ನಿಜಕ್ಕೂ ಈ ಮಸೂದೆಗಳು ರೈತರಿಗೆ ಲಾಭ ತರುವ ಮಸೂದೆಗಳೋ ಅಥವಾ ಕೃಷಿ ಕ್ಷೇತ್ರವನ್ನು ಕಾರ್ಪೊರೇಟ್ ಕುಳಗಳ ಮತ್ತು ಶ್ರೀಮಂತ ವ್ಯಕ್ತಿಗಳ ಕೈಗೆ ಒಪ್ಪಿಸಿ ಬಡವರನ್ನು ಶೋಷಣೆಗೆ ಗುರಿಯಾಗಿಸುವ ಮಸೂದೆಗಳೋ? ಸ್ವತಃ ಪ್ರಧಾನಿ ಮೋದಿ ಅವರು ಪ್ರತಿಪಕ್ಷಗಳು ರೈತರನ್ನು ದಾರಿತಪ್ಪಿಸುತ್ತಿವೆ, ಇವು ರೈತರ ಆದಾಯ ಹೆಚ್ಚಿಸಲು ಮತ್ತು ಕೃಷಿಯನ್ನು ಲಾಭದಾಯಕವಾಗಿಸಲು ಜಾರಿಗೆ ತಂದಿರುವ ಮಸೂದೆಗಳು ಎಂದು ಸಮರ್ಥಿಸಿಕೊಂಡಿದ್ದಾರೆ. ವಾಸ್ತವ ಏನೆಂದರೆ, ಈ ಮೂರು ಮಸೂದೆಗಳಲ್ಲಿ, ಅಂದರೆ, 1.ರೈತರ ಉತ್ಪನ್ನಗಳ ವ್ಯಾಪಾರ ಮತ್ತು ವ್ಯವಹಾರಗಳ ಮಸೂದೆ, 2.ಬೆಲೆ ಖಾತ್ರಿ ಮತ್ತು ಕೃಷಿ ಸೇವೆಗಳ ಒಪ್ಪಂದ ಮಸೂದೆ, 3.ಅಗತ್ಯ ವಸ್ತುಗಳ ತಿದ್ದುಪಡಿ ಮಸೂದೆಗಳಲ್ಲಿ ಅಡಕವಾಗಿರುವ ಅಂಶಗಳ ಬಗ್ಗೆ ಬಹುತೇಕ ರೈತರಿಗೆ ಮಾಹಿತಿ ಇಲ್ಲ. ಈ ಮಸೂದೆಗಳಿಂದಾಗಿ ರೈತರು ತಮ್ಮ ಉತ್ಪನ್ನಗಳನ್ನು ಎಪಿಎಂಸಿಯ ಹೊರಗೂ ಮಾರಬಹುದು ಮತ್ತು ರೈತರು ತಮ್ಮ ಜಮೀನನ್ನು ಗುತ್ತಿಗೆ ಕೃಷಿಗೆ ನೀಡಬಹುದು ಎಂಬ ಎರಡು ಅಂಶಗಳು ಮಾತ್ರ ಸದ್ಯಕ್ಕೆ ಪ್ರಚಾರದಲ್ಲಿವೆ. ಇವುಗಳ ಹೊರತಾಗಿಯೂ ಈ ಮಸೂದೆಗಳಲ್ಲಿ ಸಾಕಷ್ಟು ವಿಚಾರಗಳಿವೆ. ಅವುಗಳ ಬಗ್ಗೆ ಬೆಳಕು ಚೆಲ್ಲುವ ಮತ್ತು ರೈತರಿಗೆ ಈ ಮೂರೂ ಮಸೂದೆಗಳಲ್ಲಿರುವ ಅಷ್ಟೂ ಅಂಶಗಳನ್ನು ಸರಳವಾಗಿ ಮನವರಿಕೆ ಮಾಡಿಕೊಡುವ ಕೆಲಸ ಮೊದಲು ಆಗಬೇಕಾಗಿದೆ. ಆಗ ರೈತರೇ ತಮಗೆ ಈ ಮಸೂದೆಗಳು ಒಳ್ಳೆಯದೋ ಅಥವಾ ಮಾರಕವೋ ಎಂಬುದನ್ನು ನಿರ್ಧರಿಸುತ್ತಾರೆ.

ರೈತರ ಒಳಿತು ಮತ್ತು ಕೃಷಿ ಕ್ಷೇತ್ರದ ಏಳ್ಗೆ ಎಂಬುದು ಬೇರೆ ಬೇರೆ ಸಂಗತಿ. ಇವೆರಡರ ನಡುವೆ ಸಣ್ಣ ವ್ಯತ್ಯಾಸವಿದೆ. ಕೃಷಿ ಕ್ಷೇತ್ರದ ಸುಧಾರಣೆಗೆ ತೆಗೆದುಕೊಳ್ಳುವ ನಿರ್ಧಾರಗಳೆಲ್ಲ ರೈತರಿಗೆ ಒಳಿತನ್ನೇ ಮಾಡಬೇಕಿಲ್ಲ. ಹಾಗೆಯೇ, ರೈತರ ಒಳಿತಿಗಾಗಿ ತೆಗೆದುಕೊಳ್ಳುವ ನಿರ್ಧಾರಗಳೆಲ್ಲ ದೇಶದ ಕೃಷಿಕ್ಷೇತ್ರವನ್ನು ಅಭಿವೃದ್ಧಿಗೊಳಿಸಬೇಕೆಂದಿಲ್ಲ. ಆದರೆ, ಕೃಷಿಯ ವಿಚಾರಕ್ಕೆ ಬಂದಾಗ ಬೇರೆಲ್ಲಕ್ಕಿಂತ ರೈತರ ಹಿತವೇ ಮುಖ್ಯವಾಗಬೇಕು. ಇದನ್ನು ಗಮನದಲ್ಲಿರಿಸಿಕೊಂಡು ಸರ್ಕಾರ ಮುಂದಿನ ಹೆಜ್ಜೆ ಇರಿಸಬೇಕಿದೆ.